- ಡಿಸೆಂಬರ್ ಸಂಚಿಕೆ ಆಕರ್ಷಕವಾಗಿ ಮೂಡಿಬಂದಿದೆ. ಜನಪದ ಗಾಯಕಿ ಕಾಳಮ್ಮ ಚೆಲುವಾದಿ ('ಹಾಡಿನ ಹಿಂದೆ ಹೋದಾಕಿಯನ್ನ ಹಾಡೇ ಹಿಂಬಾಲಿಸಿತು' ಅವರ ಸಂದರ್ಶನ (ಚಿದಾನಂದ ಸಾಲಿ) ಆಡುಭಾಷೆಯಿಂದ ಗಮನ ಸೆಳೆಯುತ್ತದೆ.

**ಸದಾನಂದ ಹೆಗಡೆಕಟ್ಟೆ, ಮೂಡುಬಿದರೆ**

- ಈ ಸಂಚಿಕೆಯಲ್ಲಿ ಓದುಗರ ಗಮನ ಸೆಳೆದ ಬಸವರಾಜ ಸಾದರ ಅವರ ಕತೆ 'ನೀನೆನ್ನ ಒತೊಮ್ಮೆ ಒಡಲುಗೊಂಡು ನೋಡಾ...' ಗೋವಿನ ಹಾಡಿನ ಮುಂದುವರೆದ ಭಾಗದಂತಿದೆ. ಹುಲಿಮರಿಯ ಆಕ್ರಂದನ ಓದುಗರ ಕರುಳು ಕಿವುಚುವಂತೆ ಮೂಡಿಬಂದಿದೆ. ಅದರ ತಬ್ಬಲಿತನ ಎಂತಹವರ ಮನಸ್ಸನ್ನೂ ಕಟ್ಟಿಹಾಕುತ್ತದೆ.

**ಬೇಲೂರು ದ.ಶಂ. ಪ್ರಕಾಶ್, ಮೈಸೂರು**

- ಕತೆ ನಮ್ಮನ್ನು ಚಿಂತನೆಯ ಆಳಕ್ಕೆ ದೂಡಿದೆ. ಕ್ರೌರ್ಯವನ್ನೇ ತನ್ನ ಬದುಕಿನ ಅಸ್ತ್ರವನ್ನಾಗಿಸಿಕೊಂಡ ಮಾನವ ಕಾಡಿನಲ್ಲಿರಬೇಕಿತ್ತು. ಹಸಿವು ಇಂಗಿದ ನಂತರ ಬೇಟೆಗೆ ಇಳಿಯದ ಪ್ರಾಣಿಗಳೇ ನಾಡಿನಲ್ಲಿರಬೇಕಾಗಿತ್ತು ಎಂಬುದನ್ನು ಈ ಕತೆ ಧ್ವನಿಸುತ್ತದೆ.

**ಎಸ್.ಎಸ್. ಪಾಟೀಲ, ಮುಂಡರಗಿ**

- ಕತೆಗಾರರು ಈ ಶತಮಾನದ ಪ್ರಶ್ನೆಗಳನ್ನು ಹಸಿದ ಹುಲಿಯ ಬಾಯಿಯಿಂದ ಹೇಳಿಸಿ, ಓದುಗರನ್ನು ಚಿಂತನೆಗೆ ಹಚ್ಚಿದ್ದಾರೆ.

**ಎನ್. ಗೋಪಾಲ ರಾವ್, ಬೆಂಗಳೂರು**

- ವೈವಿಧ್ಯಮಯ ವಿಷಯ ವಸ್ತುಗಳಿಂದ ಕೂಡಿದ ಈ ಸಂಚಿಕೆ ಸೊಗಸಾಗಿದೆ. 'ನೀನೆನ್ನ ಒತೊಮ್ಮೆ ಒಡಲುಗೊಂಡು




ನೋಡಾ' ಕತೆ ಪ್ರಕೃತಿಯ ನಿಯಮವನ್ನು, ಮನುಷ್ಯನ ನಂಬಿಕೆಯನ್ನು ಪ್ರಶ್ನಿಸುವಂತಿದೆ.

**ಕಪಿಲಾ, ಮೈಸೂರು**

- ಅನುವಾದಿತ ಕತೆ 'ಮೊಹರು'ವಿನ (ಮೂಲ: ಲಕ್ಷ್ಮಣರಾವ್ ಸರ್‌ದೇಸಾಯಿ, ಕನ್ನಡಕ್ಕೆ: ಶಾ.ಮಂ. ಕೃಷ್ಣರಾಯ) ಎರಡೂ ಮುಖ್ಯಪಾತ್ರಗಳ ಹೃದಯ ವೈಶಾಲ್ಯತೆ ಮೆಚ್ಚುಗೆಯಾಯಿತು.

**ಎಚ್.ಎಸ್. ಸತ್ಯನಾರಾಯಣರಾವ್, ಅರಕಲವಾಡಿ**

- ಉದಯ್ ಜಾದೂಗಾರ್ ಅವರ 'ಬ್ಯಾಡ್ ಲಕ್' ಕತೆಯನ್ನು ಓದಿದಾಗ ವಿಧಿನಿಯಮದ ಮುಂದೆ ನಮ್ಮ ಲೆಕ್ಕಾಚಾರ ಏನೂ ನಡೆಯುವುದಿಲ್ಲ ಎಂದೆನಿಸಿತು.

**ಪಿ. ಜಯವಂತ ಪೈ, ಕುಂದಾಪುರ**

- ಅಲಕ ತೀರ್ಥಹಳ್ಳಿ ಅವರ ಅತಿ ಸಣ್ಣಕತೆ 'ನೊಣ' ನೆನಪುಗಳೆಂದರೆ ತಟ್ಟೆಯ ಮೇಲೆ ಕೂರಲು ಯತ್ನಿಸುವ ನೊಣವನ್ನುವ ಮಾತಿಗೆ ಉದಾಹರಣೆಯಂತಿದೆ.

**ಮೋಹನ ಹಣಗಿ, ಅಮೀನಗಡ**